# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1589 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 21-03-2025 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಹಿಂದುಳಿದ ವರ್ಗದ ಪ್ರವರ್ಗ-1ರಲ್ಲಿ ಬರುವ ಚಿಕ್ಕ ಸಮುದಾಯವಾದ ಗೌಳಿ (ಧನಗರಗೌಳಿ) ಸಮುದಾಯದವರಿಗೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಬಿಟ್ಟರೆ ಬೇರೆ ಯಾವ ಜಿಲ್ಲೆ ಅಥವಾ ತಾಲ್ಲೂಕಿನಲ್ಲಿಯೂ ಗೌಳಿ ಜನಾಂಗದ ಸಮುದಾಯ ಭವನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಮುಂದಿನ ಕ್ರಮಗಳೇನು ; (ವಿವರ ನೀಡುವುದು) | ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರದಮಡಿ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕಿನ ಈ ಕೆಳಗಿನ ಸ್ಥಳಗಳಲ್ಲಿ ಧನಗರಗೌಳಿ ಸಮುದಾಯದವರ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡಲಾಗಿರುತ್ತದೆ.<br>**(ರೂ. ಲಕ್ಷಗಳಲ್ಲಿ)**<br><br>ಕ್ರ. ಸಂ / ಸಮುದಾಯ ಭವನದ ಹೆಸರು ಮತ್ತು ವಿಳಾಸ / ಮಂಜೂರಾಗಿರುವ ಮೊತ್ತ<br>1. ದನಗರ ಗೌಳಿ ಭವನ ಭಾಗವತಿ ಹಳಿಯಾಳಿ ತಾಲ್ಲೂಕು — 35.00<br>2. ದನಗರ ಗೌಳಿ ಭವನ, ರಾಮನಗರ, ಜೋಯಿಡಾ. — 30.00<br>3. ಹಳಿಯಾಳ ತಾಲ್ಲೂಕಿನ ಜನಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜತಗಾ ಗೌಳಿವಾಡದಲ್ಲಿ ಗೌಳಿ ಸಮುದಾಯ ಭವನ — 15.00<br>4 ಹಳಿಯಾಳ ಪಟ್ಟಣದಲ್ಲಿ ತಾಲ್ಲೂಕು ಸಮಗ್ರ ಧನಗರಗೌಳಿ ಅಭಿವೃದ್ಧಿ ಸಮಾಜದ ಸಮುದಾಯ ಭವನ ನಿರ್ಮಾಣ — 20.00<br><br>ಯಲ್ಲಾಪುರ ತಾಲ್ಲೂಕಿನ ದನಗರಗೌಳಿ ಸಮುದಾಯ ಸಮಿತಿ (ರಿ), ಮಹದೇವ ಕೊಪ್ಪ, ಯಲ್ಲಾಪುರ ತಾಲ್ಲೂಕು ಇವರಿಂದ ಅನುದಾನ ಮಂಜೂರು ಮಾಡುವಂತೆ ಕೋರಿ ಮನವಿ ಸ್ವೀಕೃತವಾಗಿದ್ದು, ಮಾರ್ಗಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸದರಿ ಸಂಸ್ಥೆಯವರಿಗೆ ಸೂಚಿಸಲಾಗಿರುತ್ತದೆ.<br><br>ಉಳಿದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ದನಗರಗೌಳಿ ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡುವಂತೆ ಕೋರಿ ಯಾವುದೇ ಪ್ರಸ್ತಾವನೆ ಸ್ವೀಕೃತಿಗೊಂಡಿರುವುದಿಲ್ಲ. |
| ಆ) | ಆದ್ಯತೆ ಮೇರೆಗೆ ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗೌಳಿ ಸಮಾಜದ ತಾಲ್ಲೂಕು ಅಥವಾ ಜಿಲ್ಲೆಗೊಂದು ಸಮುದಾಯ ಭವನವನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಮುಂದಿನ ಯೋಜನೆ ಏನು ; (ಸಂಪೂರ್ಣ ಮಾಹಿತಿ ನೀಡುವುದು) | |

| | | |
|---|---|---|
| | | ಮುಂದುವರೆದು, ವಿವಿದ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಾಲ್ಲೂಕು ಅಥವಾ ಜಿಲ್ಲೆಗೊಂದು ಗೌಳಿ ಸಮಾಜದ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಮಾರ್ಗಸೂಚಿ ಗಳನ್ವಯ ಸಂಸ್ಥೆಯವರಿಂದ ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸ್ವೀಕೃತಗೊಂಡಲ್ಲಿ, ಸದರಿ ಯೋಜನೆಯಡಿ ಲಭ್ಯವಾಗುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಸಹಾಯಧನ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತದೆ. |

ಸಂಖ್ಯೆ: ಹಿಂವಕ 377 ಬಿಎಂಎಸ್ 2025

(ಶಿವರಾಜ.ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.